# ಕನ್ನಡ ರಾಜ್ಯೋತ್ಸವ ಆಚರಣೆಯ ವರದಿ

ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮದರ್ಜೆ ಕಾಲೇಜು ವತಿಯಿಂದ ದಿನಾಂಕ ೨೬/೧೧/೨೦೨೧ ಶುಕ್ರವಾರದಂದು ಕಾಲೇಜಿನ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸುಮಾರು ೧೦:೩೦ ಗಂಟೆಗೆ ಕಾರ್ಯಕ್ರಮ ಆರಂಭವಾಯಿತು.

ಸರಿಸುಮಾರು ಎರೆಡುವರೆ ಸಾವಿರ ವರ್ಷಗಳ ಸಾಂಸ್ಕೃತಿಕ ಇತಿಹಾಸದ ಜೊತೆಗೆ ಶ್ರೀಮಂತ ಪರಂಪರೆಯನ್ನು ಹೊಂದಿರುವಂಥದ್ದು ನಮ್ಮ ತಾಯ್ನುಡಿ ಕನ್ನಡ. ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಜೊತೆಗೆ ಶಾಸ್ತ್ರೀಯ ಸ್ಥಾನಮಾನ ಪಡೆದ ಕನ್ನಡ ನಮ್ಮ ಅಸ್ಮಿತೆ, ಕನ್ನಡ ನಮ್ಮ ಅನನ್ಯತೆ, ಕನ್ನಡವೇ ನಮ್ಮ ಆದ್ಯತೆ ಎಂಬುದನ್ನು ಇಂದಿನ ತಲೆಮಾರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಆರಂಭವಾದ ಈ ಸಮಾರಂಭದ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾದ ಜಾನಪದ ಪರಿಷತ್ ರಾಜ್ಯಧ್ಯಕ್ಷರಾದ ಎಸ್.ಬಾಲಾಜಿ, ಅಧ್ಯಕ್ಷತೆಯ ಸ್ಥಾನದಲ್ಲಿ ಆರ್.ಬಿ.ಎ.ಎನ್.ಎಂ.ಎಸ್ ಶಿಕ್ಷಣದತ್ತಿ ಸಂಸ್ಥೆಯ ಆಡಳಿತಾಧಿಕಾರಿಗಳಾದ ಡಾ.ವೀರಭದ್ರಪ್ಪರವರು, ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರತಾಪ್, ಉಪ ಪ್ರಾಂಶುಪಾಲರಾದ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ರವೀಂದ್ರರವರು ಉಪಸ್ಥಿತರಿದ್ದರು.

ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರತಾಪ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಾನಪದ ಪರಿಷತ್ ರಾಜ್ಯಧ್ಯಕ್ಷರಾದ ಎಸ್.ಬಾಲಾಜಿಯವರನ್ನು ಪರಿಚಯಿಸಿ ಸ್ವಾಗತಕೋರಿದಲ್ಲದೆ, ಕನ್ನಡ ರಾಜ್ಯೋತ್ಸವದ ಆಚರಣೆಯ ಮಹತ್ವವನ್ನು ತಿಳಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮುಖ್ಯ ಅತಿಥಿಗಳು ಹಾಗೂ ವೇದಿಕೆಯ ಮೇಲಿನ ಗಣ್ಯರು ದೀಪವನ್ನು ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಾಡಗೀತೆಯನ್ನು ಹಾಡಿದ ಹರ್ಷಿತಾ ಮತ್ತು ತಂಡದವರೊಂದಿಗೆ ಸಮಾರಂಭದಲ್ಲಿ ನೆರೆದಿದ್ದ ಎಲ್ಲರೂ ಎದ್ದುನಿಂತು ನಾಡಗೀತೆಗೆ ಗೌರವಿಸಲಾಯಿತು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ನಮ್ಮ ಕಾಲೇಜಿನಲ್ಲಿ ಏರ್ಪಡಿಸಿದ್ದ ದೇಶೀಯ ಉಡುಪುಗಳು ಮತ್ತು ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಿಸಿದರು.

ಮುಖ್ಯ ಅತಿಥಿಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಜಾನಪದದ ವ್ಯಾಪ್ತಿ, ಜನಪದರ ಪಾರಂಪರಿಕ ಜ್ಞಾನ,ಮೌಲ್ಯಗಳು ಜಾನಪದದ ಸೊಗಡನ್ನು ಕುರಿತು ಯುವಪೀಳಿಗೆಗೆ ಮನಸ್ಸಿಗೆ ನಾಟುವಂತೆ ಹೇಳಿದ್ದಷ್ಟೇ ಅಲ್ಲದೆ ಜಾನಪದ ಪರಂಪರೆಯ ಕಲೆಗಳನ್ನು ಕಾಲೇಜಿನಲ್ಲಿ ರೂಢಿಸಿಕೊಳ್ಳುವಂತೆ ಅದಕ್ಕೆ ಅಗತ್ಯವಾದ ಸಹಕಾರ ಮತ್ತು ಮಾರ್ಗದರ್ಶನ ನೀಡಲು ಸದಾಸಿದ್ಧ ಎಂದು ಉಲ್ಲೇಖಿಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದ ಈ ಸಂಸ್ಥೆಯ ಆಡಳಿತಾಧಿಕಾರಿಗಳಾದ ಡಾ.ವೀರಭದ್ರಪ್ಪರವರು ಜನಪದರ ಜೀವನಪ್ರೀತಿಯನ್ನು ಹಾಗೂ ಜಾನಪದ ಪರಂಪರೆಯ ಕಲೆಗಳನ್ನು ಪ್ರೋತ್ಸಾಹ ನೀಡುವ ಭರವಸೆಯನ್ನು ನೀಡಿದರು.

ಮುಖ್ಯ ಅತಿಥಿಗಳಿಗೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರತಾಪ್ ಹಾಗೂ ಆಡಳಿತಾಧಿಕಾರಿಗಳಾದ ಡಾ.ವೀರಭದ್ರಪ್ಪರವರು ಸನ್ಮಾನ ಮಾಡುವುದರ ಮೂಲಕ ಗೌರವಿಸಿದರು.

ನಾಡಗೀತೆ, ವರ್ಣರಂಜಿತ ನೃತ್ಯಗಳು, ಕಿರುನಾಟಕ, ವಸ್ತ್ರವಿನ್ಯಾಸ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತಷ್ಟು ಮೆರಗನ್ನು ನೀಡಿತು. ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ಭಾಷಾ ವಿಭಾಗದ ಉಪನ್ಯಾಸಕರಾದ ಪುಷ್ಪಲತಾ ಕೆ.ಆರ್ ಹಾಗೂ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಮಹಾಲಕ್ಷ್ಮಿ.ಎ ವಂದನಾರ್ಪಣೆಯನ್ನು ಸಲ್ಲಿಸಿ, ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

**ವರದಿಗಾರರು**

**ಪುಷ್ಪಲತಾ ಕೆ.ಆರ್**

**ಉಪನ್ಯಾಸಕರು, ಕನ್ನಡ ಭಾಷಾ ವಿಭಾಗ**